( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ **16.10.2025**
ಅಸಲು ದಾವಾ **.ಸಂ.38/2016**
ಪಿ.ಡಬ್ಲ್ಯೂ**-1**

ಮುಂದುವರೆದ ಪಾಟೀ ಸವಾಲು ಃ ಶ್ರೀ ಓ.ಡಿ.ಜಿ. ವಕೀಲರಿಂದಃ

**1.** ಸ.ನಂ.**5/3** ರ ಜಮೀನಿನ ಪೂಃಕ್ಕೆ ಗಡಾರಿ, ಪಃಕ್ಕೆ ಹೊನ್ನೇಗೌಡ ಮತ್ತು ದಾಸಪ್ಪರವರ ಹಿತ್ತಲು, ಉಃಕ್ಕೆ ನಾಲೆ ಮತ್ತು ರಸ್ತೆ, ದಃಕ್ಕೆ ರಸ್ತೆ ಬರುತ್ತದೆ. ಈಗ ನಾನು ಹೇಳಿದ ಚೆಕ್ಕುಬಂದಿ ಶ್ರೀನಿವಾಸ ( ವಾದಿಯು ) ಖರೀದಿ ಮಾಡಿದ ಕ್ರಯಪತ್ರದ ಚಕ್ಕುಬಂದಿ ಎಂದರೆ ಸರಿ. ವಾದಿಯ ತಂದೆ ಸೂರ್ಯನಾರಾಯಣರವರಿಂದ ಅವರ ಹಿಸ್ಸೆಗೆ ಬಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆಂದರೆ ಸಾಕ್ಷಿಯು ನಮ್ಮ ಬಾಬ್ತು **3** ಗುಂಟೆ ಜಮೀನನ್ನು ಹೊರತುಪಡಿಸಿ ಹಿತ್ತಲು ಮತ್ತು ಮನೆಯನ್ನು ಮಾರಾಟ ಮಾಡಿದ್ದಾರೆಂದು ನುಡಿಯುತ್ತಾರೆ. ವಾದಿಯ ತಂದೆ ಖರೀದಿ ಮಾಡಿದ ಆಸ್ತಿಗೆ ನಾನು ತಂಟೆ ತಕರಾರು ಮಾಡುತ್ತಾ ಬರುತ್ತಿದ್ದೇನೆ ಎಂದರೆ ಸಾಕ್ಷಿಯು ನಮ್ಮ ಬಾಬ್ತು ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ನಾನು ತಂಟೆ ತಕರಾರು ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಈ ಸಂಬಂಧ ವಾದಿಯು ನನ್ನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರೆಂದರೆ ಸರಿ. ಸಾಕ್ಷಿಯು ಮುಂದುವರೆದು, ಪೊಲೀಸ್ ಠಾಣೆಯಲ್ಲಿ ತೀರ್ಮಾನ ಮಾಡಿಕೊಳ್ಳಿ ಹಾಗೂ ಗಾಯ ಮಾಡಿರುವುದಕ್ಕೆ ಸ್ವಲ್ಪ ಹಣವನ್ನು ನೀಡಿ ತೀರ್ಮಾನ ಮಾಡಿಕೊಳ್ಳಿ ಎಂದು ಮುಚ್ಚಳಿಕೆಯನ್ನು ಮಾಡಿಕೊಂಡರು ಎಂದು ನುಡಿಯುತ್ತಾರೆ. ನಂತರ ಪೊಲೀಸ್ ಠಾಣೆಯಿಂದ ಬಂದ ನಂತರವೂ ಸಹ ನಾನು ತಂಟೆ ತಕರಾರು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯು ಈ ದಾವೆಯನ್ನು ಹೂಡಿದ್ದಾರೆಂದರೆ ಸಾಕ್ಷಿಯು ಸುಳ್ಳು ದಾವೆಯನ್ನು ಸಲ್ಲಿಸಿದ್ದಾರೆಂದು ನುಡಿಯುತ್ತಾರೆ.

**2.** ಸೂರ್ಯನಾರಾಯಣರವರ ಹಿಸ್ಸಾ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲವೆಂದರೆ ಸಾಕ್ಷಿಯು ಸೂರ್ಯನಾರಾಯಣರವರ ಆಸ್ತಿ ಗ್ರಾಮಪಂಚಾಯ್ತಿಗೆ ಸೇರಿರುತ್ತದೆ

ಹಾಗೂ ನಮ್ಮ ಬಾಬ್ತು ಜಮೀನು ಸ.ನಂ.ನಲ್ಲಿದೆ. ದಾವಾ ಆಸ್ತಿ ಮೇಲೆ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲದಿದ್ದರೂ ವಾದಿಗೆ ತಂಟೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.**5/3** ರ ಜಮೀನು ಕಟ್ಟೆಪುರ ನಾಲೆಗೆ ಮುಳುಗಡೆಯಾಗಿದೆ ಮತ್ತು ಈ ಸಂಬಂಧ ಪಹಣಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ ಎಂದರೆ ಸಾಕ್ಷಿಯು ಬಹಳ ಹಿಂದೆಯೇ ಮುಳುಗಡೆಯಾಗಿದೆ ಎಂದು ನುಡಿಯುತ್ತಾರೆ. ಮುಳುಗಡೆಯಾದ ಸಂಬಂಧ ನನ್ನ ತಂದೆ ಪರಿಹಾರವನ್ನು ಪಡೆದಿಲ್ಲ. ಸ.ನಂ.**5/3** ರಲ್ಲಿ **3** ಗುಂಟೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ.ನಂ.**5/3** ರ ಜಮೀನನ್ನು ಅಳತೆ ಮಾಡಿಸಿಲ್ಲ. ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲವೆಂದರೆ ಸಾಕ್ಷಿಯು **3** ಗುಂಟೆ ಜಮೀನಿನಲ್ಲಿ ದಾವಾ ಆಸ್ತಿ ಬರುತ್ತದೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲಃ

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಜೆ.ಎಂ.ಎಫ್.ಸಿ,ಅರಕಲಗೂಡು.

OS. 38/2016
Pw-1